ರೋಡ್‌ನಲ್ಲಿ ಏನಾದರೂ ಲೀಕ್ ಆಗುತ್ತಿದ್ದರೆ ಆ ಬಗ್ಗೆ ಪದೇ ಪದೇ ಫೋನ್ ಮಾಡಿ ಹೇಳಬೇಕು. ಆದುದರಿಂದ ನಾಲ್ಕು ಡಿವಿಶನ್‌ನಲ್ಲಿ ಅವರೇ ಒಂದು Flying Squad ಮಾಡಿ ಅವರೇ ಇದರ ಬಗ್ಗೆ ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅವರು ಇದನ್ನು ಮಾಡಿ Water leakage detect ಮಾಡಿದರೆ ಕುಡಿಯುವ ನೀರಿಗೆ ಸ್ವಲ್ಪ ಅನುಕೂಲವಾಗುತ್ತದೆ ಎಂದು ಹೇಳಿ ನನಗೆ ಬೇಡಿಕೆ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4. ಪ್ರಕಟಣೆ :

ವಿಷಯ : ಮಾನ್ಯ ಮುಖ್ಯಮಂತ್ರಿಗಳು, ಸಚಿವರ/ಶಾಸಕರ ಗೌರವಾರ್ಥ ಔತಣಕೂಟ ಏರ್ಪಡಿಸಿರುವ ಬಗ್ಗೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು, ಈ ದಿವಸ ಮಧ್ಯಾಹ್ನ ಮಾನ್ಯ ಸಚಿವರುಗಳಿಗೆ ಹಾಗೂ ಮಾನ್ಯ ಶಾಸಕರುಗಳ ಗೌರವಾರ್ಥ ಬ್ಯಾಂಕ್ವೆಟ್ ಹಾಲ್‌ನಲ್ಲಿ ಔತಣಕೂಟವನ್ನು ಏರ್ಪಡಿಸಿರುತ್ತಾರೆ. ತಾವು ದಯವಿಟ್ಟು ಭಾಗವಹಿಸಬೇಕೆಂದು ಕೋರಿದೆ. ಈಗ ಸದನವನ್ನು ಮಧ್ಯಾಹ್ನ 2.45 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 08 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ಮಧ್ಯಾಹ್ನ 2 ಗಂಟೆ 45 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)

(ಮತ್ತೆ ಸಭೆಯು ಮಧ್ಯಾಹ್ನ 2.58 ಗಂಟೆಗೆ ಪ್ರಾರಂಭಗೊಂಡಿತು, ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಮಾನ್ಯ ಶಿವಲಿಂಗೇಗೌಡರೆ, ತಾವು ಪ್ರಾರಂಭ ಮಾಡಿ.